# ಜಿಲ್ಲಾ ಪಂಚಾಯತ್ ಹಾಸನ

## ಅಧಿಕೃತ ಜ್ಞಾಪನ

ವಿಷಯ:- 2011-12ನೇ ಸಾಲಿಗೆ ಹೊಸದಾಗಿ ವೇತನಾನುದಾನಕ್ಕೆ ಒಳಪಡಿಸಿದ ಪ್ರಾಥಮಿಕ ಶಾಲಾ ಸಿಬ್ಬಂದಿಗಳಿಗೆ ವೇತನ ಪಾವತಿ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧಿಕೃತ ಜ್ಞಾಪನ/ಸುತ್ತೋಲೆ/ಆದೇಶ ಸಂಖ್ಯೆ

(1) FD/77/ZPA/2003/Dated:-8-9-2004.
(2) FD/04/ZPA/2003/Dated:-2-5-2005.
(3) FD/07/ZPA/2003/Dated:-14-7-2005.
(4) FD/74/BRS/2012/Bangalore/Dated:3-10-2012.
(5) ಮುಕಾನಿಅ ರವರ ಅನುಮೋದನೆ ಅನುದಾನ ಬಿಡುಗಡೆ ಆದೇಶ ಟಿಪ್ಪಣಿ ಕ್ರಮಸಂಖ್ಯೆ 12 ದಿನಾಂಕ:19-10-2012.
(6) ಉಪನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ರವರ ಪತ್ರಸಂಖ್ಯೆ:ಲೆಪ-4/ಖಾಅನು/1/2012-13/ದಿನಾಂಕ: 27-7-2012.

-o-

ಉಲ್ಲೇಖ(1)ರಲ್ಲಿನ ಆದೇಶದಲ್ಲಿ ಜಿಲ್ಲಾಪಂಚಾಯತ್ ನಿಧಿ/ತಾಲ್ಲೂಕು ಪಂಚಾಯತ್ ನಿಧಿ ಲೆಕ್ಕ ನಿರ್ವಹಣೆ ಬಗ್ಗೆ ವಿವರಿಸಿದೆ. ಅದರಂತೆ ಜಿಲ್ಲಾಪಂಚಾಯತ್/ತಾಲ್ಲೂಕು ಪಂಚಾಯತ್ ನಿಧಿಗಳನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಆಯಾ ನಿಧಿ-I, II ಹಾಗೂ III ಎಂದು ಮೂರು ಭಾಗಗಳಾಗಿ ವಿಂಗಡಿಸಿದೆ. ಅದರಂತೆ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳು ಆಯಾ ನಿಧಿಗಳಲ್ಲಿ ಬರುವ ಯೋಜನೆ ಯಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಲೆಕ್ಕ ಇಡಬೇಕಾಗಿದೆ.ಅದರ ಪ್ರಕಾರವಾಗಿ 2012-13ನೇ ಸಾಲಿನಲ್ಲಿ ಹೊಸದಾಗಿ ವೇತನಾನುದಾನಕ್ಕೆ ಒಳಪಡಿಸಿದ ಪ್ರಾಥಮಿಕ ಶಾಲಾ ಸಿಬ್ಬಂದಿಗಳಿಗೆ ವೇತನ ಪಾವತಿಗೆ ತಾಲ್ಲೂಕು ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ ಹೊರಡಿಸಲಾಗಿದೆ.

**ಸಂಖ್ಯೆ:ZPH/BUD/TPG-11/2012-13** **ದಿನಾಂಕ:19-10-2012**

ಉಲ್ಲೇಖ(4)ರ ಸರ್ಕಾರಿ ಆದೇಶದಲ್ಲಿ ಜಿಲ್ಲಾ ವ್ಯಾಪ್ತಿಯ 5 ತಾಲ್ಲೂಕು ಪಂಚಾಯತಿ ಅಧೀನದಲ್ಲಿ ಬರುವ ಉಲ್ಲೇಖ(6)ರ ಪತ್ರದಲ್ಲಿ ಕೋರಿರುವಂತೆ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳ 2011-12ನೇ ಸಾಲಿಗೆ ವೇತನಾನುದಾನಕ್ಕೆ ಒಳಪಟ್ಟ 7 ಶಾಲೆಗಳ ಸಿಬ್ಬಂದಿಗಳಿಗೆ ವೇತನ ಭತ್ಯೆಗೆ ಅನುದಾನ ಬಿಡುಗಡೆ ಮಾಡಲಾಗಿದೆ.

ಹೀಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯಾಯ ತಾಲ್ಲೂಕುಗಳಿಗೆ ಸಂಬಂಧಿಸಿದ ಅನುದಾನವನ್ನು ಬಿಳಿ ಬಣ್ಣದ ಬಿಲ್ಲಿನಲ್ಲಿ ಸರ್ಕಾರದ ಲೆಕ್ಕಕ್ಕೆ ವೆಚ್ಚ ಭರಿಸಿ ಹಳದಿ ಬಣ್ಣದ ಚಲನ್ ಮೂಲಕ ಆಯಾಯ ತಾಲ್ಲೂಕು ಪಂಚಾಯತಿ ನಿಧಿ- IIಕ್ಕೆ ಜಮಾ ಮಾಡಿಕೊಳ್ಳಲು ತಿಳಿಸಿದೆ ಹಾಗೂ ಬಿಳಿ/ಹಳದಿ ಬಣ್ಣದ ಪೇಯೀಸ್ ರಸೀದಿ ಮತ್ತು ಹಳದಿ ಚಲನ್ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-II ಎಂದು ಮೊಹರು ಹಾಕುವುದು.

ಈ ರೀತಿ ತಾಲ್ಲೂಕು ಪಂಚಾಯತಿ ನಿಧಿ-IIಕ್ಕೆ ಜಮಾ ಮಾಡಿಕೊಂಡ ಅನುದಾನವನ್ನು ನಿಯಮಾನುಸಾರ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಒಂದೇ ಕಂತಿನಲ್ಲಿ ಪೂರ್ಣ ಹಣ ಬಿಡುಗಡೆ ಮಾಡಿ ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ಸೂಚಿಸಿದೆ.

ಉಲ್ಲೇಖ(5)ರ ಸರ್ಕಾರದ ಸುತ್ತೋಲೆಯಲ್ಲಿ ನಿರ್ದೇಶಿಸಿದಂತೆ ಲಿಂಕ್ ಪುಸ್ತಕದಲ್ಲಿ ಅಳವಡಿಸಲಾದ ವೆಚ್ಚದ ನ್ಯೂ ಕೋಡನ್ನು ಬಳಕೆ ಮಾಡಲು ಸೂಚಿಸಿದೆ.

ಸರ್ಕಾರದ ನಡವಳಿ ಅನುಸಾರ 2012-13ನೇ ಸಾಲಿನ ಆರ್ಥಿಕ ವರ್ಷದ ಅನುದಾನವನ್ನು ನಿಗದಿತ ಅವಧಿಯೊಳಗೆ ಇಲಾಖೆಗೆ ಬಿಡುಗಡೆಗೊಳಿಸಲು ಹಾಗೂ ಅಧೀನ ಇಲಾಖೆಗಳಿಗೆ ವೇತನ ಸಾದಿಲ್ವಾರು, ಪ್ರವಾಸಭತ್ಯೆ, ಕಾಮಗಾರಿ ಬಿಲ್ಲುಗಳನ್ನು ಅನುದಾನ ವ್ಯಯಗತವಾಗದಂತೆ ಬಿಲ್ಲುಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಮೇಲು ಸಹಿ ಪಡೆದು ನಿಗದಿತ ಅವಧಿಯೊಳಗೆ ಖಜಾನೆಗೆ ಸಲ್ಲಿಸುವುದು. ಈ ಬಗ್ಗೆ ಅಧೀನ ಇಲಾಖೆಗೆ ಸುತ್ತೋಲೆ ನೀಡಲು ತಿಳಿಸಿದೆ.

-2)

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ತಾಲ್ಲೂಕಿನ ಹೆಸರು | ಡಿಡಿಓ ಕೋಡ್ | 2202-01-197-1-01 | |
|---|---|---|---|---|
| | | | ಯೋಜನೆ | ಯೋಜನೇತರ |
| 1 | ಆಲೂರು | 1301QQ0001 | 9.00 | - |
| 2 | ಅರಸೀಕೆರೆ | 1303QQ0001 | 11.59 | - |
| 3 | ಚನ್ನರಾಯಪಟ್ಟಣ | 1305QQ0084 | 26.31 | - |
| 4 | ಹಾಸನ | 1300QQ0002 | 21.06 | - |
| 5 | ಸಕಲೇಶಪುರ | 1307QQ0001 | 14.04 | - |
| | ಒಟ್ಟು | | 82.00 | - |

ಒಟ್ಟು ರೂ 82.00 ಲಕ್ಷಗಳು (ಒಟ್ಟು ಎಂಭತ್ತೆರಡು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚ ಶೀರ್ಷಿಕೆ 2202-00-101-0-63 ಯೋಜನೆ ಈ ಲೆಕ್ಕಶೀರ್ಷಿಕೆಯಲ್ಲಿ ಉಲ್ಲೇಖ(4)ರ ಸರ್ಕಾರಿ ಆದೇಶದಂತೆ ಉದ್ದೇಶಿತ ಕಾರ್ಯಕ್ರಮಕ್ಕೆ ಮಾತ್ರ ಬಳಕೆ ಮಾಡಲು ತಿಳಿಸಿದೆ.

(ಸಹಿ)
ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

**ಪ್ರತಿಯನ್ನು:-**

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಜಿಲ್ಲಾಪಂಚಾಯತ್,ಹಾಸನ ರವರ ಮಾಹಿತಿಗೆ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
3. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
4. ಉಪಕಾರ್ಯದರ್ಶಿಗಳು(ಆಡಳಿತ) ಮತ್ತು (ಅಭಿವೃದ್ಧಿ), ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಮಾಹಿತಿಗೆ.
5. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್______________ ತಾಲ್ಲೂಕು ಇವರ ಅಗತ್ಯ ಕ್ರಮಕ್ಕಾಗಿ.
6. ಜಿಲ್ಲಾ ಖಜಾನಾಧಿಕಾರಿಗಳು, ಖಜಾನೆ ಇಲಾಖೆ,ಹಾಸನ ರವರ ಮಾಹಿತಿಗೆ.
7. ಉಪ ಖಜಾನಾಧಿಕಾರಿಗಳು ____________ ತಾಲ್ಲೂಕು ರವರ ಮಾಹಿತಿಗೆ.
8. ಉಪನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ,ಹಾಸನ ರವರಿಗೆ ಮಾಹಿತಿಗೆ.
9. ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಕಛೇರಿ ಪ್ರತಿ.

ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

TP-1